(ಅ) ಇವುಗಳ ಜಿಲ್ಲಾವಾರು ತಾಲ್ಲೂಕುವಾರು ವಿವರಗಳು ಈ ಕೆಳಕಂಡಂತಿವೆ.

ಜಿಲ್ಲೆ	ತಾಲ್ಲೂಕು	ಹಳ್ಳಿಗಳು
೧) ಬಳ್ಳಾರಿ	ಹೊಸಪೇಟೆ	೧) ರಾಜಪುರ
	—,,—	೨) ದೇವನಸಮುದ್ರ
	—,,—	೩) ಇಟಗಿ
	—,,—	೪) ಕೃಷ್ಣಾಪುರ
	ಬಳ್ಳಾರಿ	೫) ಸಿಂಗದೇವನಹಳ್ಳಿ
	—,,—	೬) ಲಕ್ಷ್ಮೀಪುರ
	ಹೂವಿನಹಡಗಲಿ	೭) ಹರವಿಬಸವಾಪುರ
	—,,—	೮) ಪೆಟ್ಲಕಟ್ಟ
	ಕೂಡ್ಲಿ	೯) ಇಮಾದಪುರ
	—,,—	೧೦) ಕೊಮ್ಮಿನಹಳ್ಳಿ
	ಸಂಡೂರ್	೧೧) ಗಂಗ್ಲಾಪುರ
	—,,—	೧೨) ಅಪ್ಪಲಪುರ
	—,,—	೧೩) ತಿಪ್ಪನಮರ್ಡಿ
	ಹರಪನಹಳ್ಳಿ	೧೪) ನಿಟ್ಟೂರು ಬಸಪುರ
	—,,—	೧೫) ತಿರುಮಲಪುರ
	ಸಂಡೂರು	೧೬) ವಿಟ್ಟಲ್‌ನಗರ
	—,,—	೧೭) ಎಮ್ಮನಾಟಿ
	—,,—	೧೮) ವಂಡಾರಿಪುರ
	—,,—	೧೯) ಧರ್ಮಪುರ
		೨೦) ರಣಜಿತ್‌ಪುರ
		೨೧) ದೇವಗಿರಿ
		೨೨) ಕಾರ್ತಿಕೇಶ್ವರ
		೨೩) ಹುಲಿಕುಂಟ
		೨೪) ಶಂಕರಪುರ
		೨೫) ಸುಶೀಲನಗರ
		೨೬) ಸಿದ್ಧಾಪುರ

೪) ಈ ಹಳ್ಳಿಗಳು ಈಗಾಗಲೇ ಮದ್ರಾಸ್(ಅಬಾಲಿಷನ್ ಅಂಡ್ ಕನ್‌ವರ್ಷನ್ ಇಂಟು ರೈತವಾರಿ) ಮತ್ತು ಕರ್ನಾಟಕ ಸಂಡೂರ್ ಇನಾಂ ರದ್ದತಿ ಕಾಯಿದೆ ೧೯೭೬ರ ಪರಿವಿಧಿಯೊಳಗೆ ಬಂದಿವೆ ಈ ಕಾಯಿದೆಗಳ ಪ್ರಕಾರ ಈ ಇನಾಂ ಜಮೀನುಗಳು ಸರ್ಕಾರದಲ್ಲಿ ನಿಹಿತಗೊಳಿಸುವ ಅಧಿಸೂಚನೆಯನ್ನು ಹೊರಡಿಸಿದ ದಿವಾಂಕದಿಂದ ಇನಾಂ ರದ್ದತಿಯಾಗುತ್ತದೆ. ಕಾನೂನು ಇಲಾಖೆಯೊಂದಿಗೆ ಸಮಾಲೋಚಿಸಿ ಅಧಿಸೂಚನೆಯನ್ನು ಹೊರಡಿಸಲು ಈಗಾಗಲೇ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಿದ್ಯುತ್ ಪೂರೈಕೆ

೪೩. ಶ್ರೀ ವಸಂತ ವಿ. ಸಾಲ್ಯಾನ (ಕಾಪು).—ಮಾನ್ಯ ವಿದ್ಯುತ್ ಹಾಗೂ ಭೂವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇನ್ನೂ ವಿದ್ಯುತ್ ಪೂರೈಕೆ ಆಗಬೇಕಾದ ಸಣ್ಣ ಹಳ್ಳಿಗಳೆಷ್ಟು ?

ಆ) ಇವುಗಳಿಗೆ ವಿದ್ಯುತ್ ಪೂರೈಸಲು ಇನ್ನೂ ಕ್ರಮ ಕೈಗೊಳ್ಳದಿರಲು ಕಾರಣವೇನು ?

ಇ) ಯಾವಾಗ ಈ ಹಳ್ಳಿಗಳಿಗೆ ವಿದ್ಯುತ್ ಪೂರೈಸಲಾಗುತ್ತದೆ.

ಶ್ರೀ ಜೆ. ಎಸ್. ದೇಶಮುಖ್ (ವಿದ್ಯುತ್ ಗಣಿ ಮತ್ತು ಭೂವಿಜ್ಞಾನ ಮಂತ್ರಿಗಳು).—

ಅ) ೧೯೮೧ ಜನಗಣತಿಯಂತೆ ಇನ್ನು ೪,೫೦೧ ಸಣ್ಣ ಗ್ರಾಮಗಳಿಗೆ ದಕ್ಷಿಣ ಜಿಲ್ಲೆಯಲ್ಲಿ ವಿದ್ಯುದ್ದೀಕರಣ ಮಾಡಬೇಕಾಗಿದೆ.

ಆ) ಹಣದ ಕೊರತೆಯ ಪ್ರಮುಖ ಕಾರಣದಿಂದ ಸಣ್ಣ ಗ್ರಾಮಗಳನ್ನು ವಿದ್ಯುದ್ದೀಕರಣ ಮಾಡ ಲಾಗಲಿಲ್ಲ. ಆದರೂ ರಾಜ್ಯಾದಾದ್ಯಂತ ಎಲ್ಲ ಗ್ರಾಮಗಳಿಗೂ ಉಪ ಗ್ರಾಮಗಳಿಗೂ ಸಂಪನ್ಮೂಲಗಳನ್ನು ಅನುಸರಿಸಿ ವಿದ್ಯುತ್ತನ್ನು ಒದಗಿಸಲಾಗುತ್ತಿದೆ. ಎಲ್ಲಾ ಗ್ರಾಮ ಗಳಿಗೂ ವಿದ್ಯುತ್ತನ್ನು ಆದಷ್ಟು ಬೇಗ ಒದಗಿಸಿ ರಾಜ್ಯದ ನೂರಕ್ಕೆ ನೂರು ಗ್ರಾಮ ವಿದ್ಯುದ್ದೀಕರಣ ಆಗುವಂತೆ ಕ್ರಮ ಕೈಗೊಂಡಿದೆ. ಈಗಲೂ ಗ್ರಾಮಗಳಲ್ಲದೆ, ಉಪ ಗ್ರಾಮಗಳಿಗೂ ಕೂಡ ವಿದ್ಯುತ್ತನ್ನು ಒದಗಿಸಲಾಗುತ್ತಿದೆ. ನಂತರ ಉಪ ಗ್ರಾಮಗಳಿಗೂ ಹೆಚ್ಚಿನ ಪ್ರಮಾಣದಲ್ಲಿ ಕೆಲಸ ಕೈಗೊಂಡು ವಿದ್ಯುತ್ತನ್ನು ಪೂರೈಸಲಾಗುವುದು.

ಇ) ಏಳನೇ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಬಾಕಿ ಉಳಿದಿರುವ (೧-೪-೧೯೮೫ರಂತೆ) ೪,೧೫೯ ಗ್ರಾಮಗಳನ್ನು ಸಂಪನ್ಮೂಲಗಳಿಗೆ ಅನುಸಾರವಾಗಿ ವಿದ್ಯುದ್ದೀಕರಣ ಪೂರ್ಣ ಗೊಳಿಸಿ, ಎಂಟನೇ ಪಂಚವಾರ್ಷಿಕ ಯೋಜನೆ ಮತ್ತು ಆದರಿಂದಾಚೆಗೆ ಸಣ್ಣ ಹಳ್ಳಿಗಳ ವಿದ್ಯುದ್ದೀಕರಣಕ್ಕೆ ಗಮನ ನೀಡಲು ಯೋಚಿಸಿದೆ. ಏಳನೇ ಪಂಚವಾರ್ಷಿಕ ಯೋಜನೆ ಯಲ್ಲಿ ಸ್ವಲ್ಪ ಮಟ್ಟಿಗೆ ಸಣ್ಣ ಹಳ್ಳಿಗಳ ವಿದ್ಯುದ್ದೀಕರಣ ಮಾಡಲಾಗುತ್ತದೆ.

ದಕ್ಷಿಣ ಕನ್ನಡದಲ್ಲಿ ಪುನರ್ ಭೂಮಾಪನ

೪೪೧. ಶ್ರೀ ಜಿ. ಎಸ್. ಆಚಾರ್ (ಬೈಂದೂರು).—ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದ ಬೇರೆ ಬೇರೆ ಜಿಲ್ಲೆಗಳಲ್ಲಿ ಭೂ ಮಾಪನ ಆಗಿ ಕೃಷಿ ಭೂಮಿ ಹಾಗೂ ಕೃಷಿಯೇತರ ಭೂಮಿ ಎಂದು ಸ್ಪಷ್ಟವಾಗಿ ಗುರುತಿಸಲ್ಪಟ್ಟಿದ್ದರೂ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಲ್ಲವೂ ಕೃಷಿ ಭೂಮಿ ಎಂದು ನಮೂದಿತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಆ) ಗೃಹ ನಿವೇಶನದ ಕೃಷಿ ಉಪಯೋಗಕ್ಕೆ ಬಾರದ ಬಂಜರು ಭೂಮಿ, ಕಲ್ಲು ಬಂಡೆ, ಗುಡ್ಡ ಬೆಟ್ಟಗಳನ್ನು ಕೃಷಿಯೇತರ ಭೂಮಿ ಎಂದು ಪರಿಗಣಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೆ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಸಚಿವರು).—

ಅ) ಈ ಜಿಲ್ಲೆಯು ಹಿಂದಿನ ಮದ್ರಾಸು ರಾಜ್ಯದಿಂದ ಬೇರ್ಪಟ್ಟ ಜಿಲ್ಲೆಯಾಗಿದ್ದು ಅಲ್ಲಿನ ರೈತವಾರಿ ಪದ್ಧತಿಯಂತೆ ಮಳೆ ಆಧಾರಿತ ಎಲ್ಲಾ ತರಿ, ಖುಷ್ಕಿ ಮತ್ತು ಬಾಗಾಯ್ತು ಜಮೀನುಗಳು ಕೃಷಿ ಭೂಮಿ ಎಂಬುದಾಗಿ ಪರಿಗಣಿಸಲ್ಪಟ್ಟಿತ್ತು. ಕರ್ನಾಟಕ ಭೂ ಕಂದಾಯ ಅಧಿನಿಯಮ ೧೯೬೪ ಪ್ರಕರಣ ೪೫ (೨)ರ ಪ್ರಕಾರ ಮನೆಯ ಇತರ ಉದ್ದೇಶ ಬಗ್ಗೆ, ಕೃಷಿಯೇತರ ಉದ್ದೇಶದ ಬಗ್ಗೆ ಪರಿವರ್ತಿಸಲ್ಪಟ್ಟ ಕೂಡಲೇ ಸರ್ವೆ ಇಲಾಖೆಯಿಂದ ಅಳತೆ ಮಾಡಿಸಿ ಕೃಷಿಯೇತರ ಭೂಮಿಯೆಂಬುದಾಗಿ ಕಂದಾಯ ರಿಜಿಸ್ಟರುಗಳಲ್ಲಿ ಖಾತಾಯಿಸಿ ಮಾಡಲಾಗುವು ದಲ್ಲದೆ ಇಂತಹ ಜಮೀನುಗಳಿಗೆ ತೀರ್ವೆ ಮನ್ನಾ ಮಾಡಲಾಗುತ್ತದೆ.

ಆ) ಹೌದು, ಇಂತಹ ಜಮೀನುಗಳನ್ನು ಕೃಷಿಯೇತರ ಭೂಮಿಯೆಂದು ಪರಿಗಣಿಸಲಾಗಿದೆ.

ವಿಜಾಪುರ ಜಿಲ್ಲೆಯ ಬರಗಾಲ ಪರಿಹಾರ ಕಾಮಗಾರಿಗಳ ಬಗ್ಗೆ

೧೭೫. ಶ್ರೀ ಬಾಬುರೆಡ್ಡಿ ಎಂ. ತಂಗಳ್ (ಬೀಳಗಿ).—ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ವಿಜಾಪುರ ಜಿಲ್ಲೆಯಲ್ಲಿ ಈವರೆಗೆ ಕೈಗೊಂಡ ಬರಗಾಲ ಪರಿಹಾರ ಕಾಮಗಾರಿಗಳು ಎಷ್ಟು, ಅವುಗಳಲ್ಲಿ ಎಷ್ಟು ಕಾಮಗಾರಿಗಳು ಈವರೆಗೆ ಪೂರ್ತಿಗೊಂಡಿವೆ.